● **ನೀವು ಹದಿನಾಲ್ಕನೇ ವಯಸ್ಸಿನಲ್ಲಿಯೇ ಇಂಗ್ಲಿಷಿನಲ್ಲಿ ಒಂದು ಪ್ರಬಂಧ ಬರೆದಿರಿ. ಆಮೇಲೆ 'ಮೈಸಿಂಡಿಯಾ' (Mysindia) ದಲ್ಲಿ ನಿಮ್ಮ ಕಥೆ ಪ್ರಕಟವಾಯಿತು. ಅದಕ್ಕೆ ಆರ್.ಕೆ. ಲಕ್ಷ್ಮಣ್ ಚಿತ್ರಗಳನ್ನು ಬಿಡಿಸಿದ್ದರು. ಅದಾದ ಮೇಲೆ 'ಕಥೆಗಾರ' ಪತ್ರಿಕೆಯಲ್ಲಿಯೂ ನಿಮ್ಮದೊಂದು ಕಥೆ ಪ್ರಕಟವಾಯಿತು. ಬಸವರಾಜ ಕಟ್ಟೀಮನಿ ಅವರು ನಿಮ್ಮನ್ನು "ಉಜ್ವಲ ಭವಿಷ್ಯವುಳ್ಳ ಕಥೆಗಾರ" ಎಂದು ಪ್ರಶಂಸಿಸಿದ್ದರು. ಆಮೇಲೆ ನೀವು ಸೃಜನಶೀಲ ಸಾಹಿತ್ಯ ಬರವಣಿಗೆಯನ್ನೇ ಬಿಟ್ಟುಬಿಟ್ಟಿರಿ. ಯಾಕೆ?**

ನಾನು ಒಂದು ಬಗೆಯಲ್ಲಿ ಅಚಾನಕ್ಕಾಗಿ ಬರಹಗಾರ ಆದವನು. ನಾನು ನಾಲ್ಕನೇ ತರಗತಿಯಲ್ಲಿದ್ದಾಗ ಮುಲ್ಕಿ ಪರೀಕ್ಷೆ ಅಂತಿತ್ತು. ನಾನು ಎಬಿಸಿಡಿ ಕಲಿತಿದ್ದೇ ನನ್ನ ಹದಿಮೂರನೇ ವಯಸ್ಸಿಗೆ. ಪರೀಕ್ಷೆಯಲ್ಲಿ ಒಂದು ಪ್ರಬಂಧ ಬರೆಯಲು ಕೊಟ್ಟಿದ್ದರು. 'ದಿ ಮೋಸ್ಟ್ ಎಕ್ಸೈಟಿಂಗ್ ಡೇ ಇನ್ ಮೈ ಲೈಫ್' ಎನ್ನುವುದು ಪ್ರಬಂಧದ ವಿಷಯ. ಆಗ ನನಗೆ ಬದುಕಿನಲ್ಲಿ ಏನೂ ಗೊತ್ತಿರಲಿಲ್ಲ. ಪರೀಕ್ಷೆಯಲ್ಲಿ ಇಂಥ ಪ್ರಬಂಧ ಬರೆಯಲು ಕೊಟ್ಟಾಗ ನಾನಾಗಿ ಬರೆಯುತ್ತಿರಲಿಲ್ಲ. ಒಬ್ಬ ಪರ್ಸೋನಾ ಕಲ್ಪಿಸಿಕೊಂಡು ಬರೆಯುತ್ತಿದ್ದೆ. ಒಬ್ಬರು ಮಾಸ್ತರರು ಇದ್ದರು. ನನಗೆ ಇಂಗ್ಲಿಷ್–ಸಂಸ್ಕೃತ ಎರಡನ್ನೂ ಚೆನ್ನಾಗಿ ಕಲಿಸಿಕೊಟ್ಟವರು. ಅವರು ಪರೀಕ್ಷೆ ಮುಗಿದ ಮೇಲೆ ಉತ್ತರ ಪತ್ರಿಕೆ ತಂದುಕೊಡು ಎಂದರು. ಕೊಟ್ಟೆ. ಆನಂತರ ಆ ಪ್ರಬಂಧವನ್ನು ಶಾಲಾ ಪತ್ರಿಕೆಯಲ್ಲಿ ನೋಡಿದೆ. ನನಗೆ ಹೇಳದೆಯೇ ಪ್ರಕಟಿಸಿದ್ದರು. ನನಗೆ ನಿಜಕ್ಕೂ ಆಶ್ಚರ್ಯವಾಯ್ತು.

ನಾನು ಕಥೆ ಬರೆದದ್ದು ಕರ್ನಾಟಕ ಕಾಲೇಜ್‌ನಲ್ಲಿದ್ದಾಗ. ಆಗ ಇಂಗ್ಲಿಷಿನಲ್ಲಿ ಕಥೆ ಕವಿತೆ ಎರಡೂ ಬರೆಯುತ್ತಿದ್ದೆ. ಕರ್ನಾಟಕ ಕಾಲೇಜು 'ಮಿಸೆಲೆನಿ'ಯಲ್ಲಿ ಒಮ್ಮೊಮ್ಮೆ ನಾನು ಬರೆದ ಮೂರು, ನಾಲ್ಕು ಕವಿತೆಗಳು ಬರುತ್ತಿದ್ದವು. ಕನ್ನಡದಲ್ಲಿ ಕವಿತೆ ಬರೆಯಲಿಲ್ಲ. ಆಗ ಓದಿದ 'ಡೈಯಿಂಗ್ ಇನ್ ಟು ಲೈಫ್' ಎಂಬ ಜಾನ್ ಕೀಟ್ಸ್‌ನ ಪ್ರಬಂಧ ನನಗೆ ಇಷ್ಟವಾಗಿತ್ತು. ಅದನ್ನು ಓದಿಕೊಂಡು ಕಥೆ ಬರೆದೆ. ಅದು ಕಾಲೇಜ್ ಮ್ಯಾಗಜಿನ್‌ನಲ್ಲಿ ಪ್ರಕಟವಾಯ್ತು. ಆಮೇಲೆ ಅದನ್ನು ಯಾಕೆ 'ಮೈಸಿಂಡಿಯಾ'ಗೆ ಕಳಿಸಬಾರದು ಅನಿಸಿತು. ಆಗ ಆ ಪತ್ರಿಕೆಗೆ ಫಿಲಿಪ್ಸ್ ಸ್ಪ್ರಾಟ್ ಅಂತ ಸಂಪಾದಕರಿದ್ದರು. ಅವರು ಬ್ರಿಟಿಷರು. ಬಹಳ ಸಂತೋಷದಿಂದ ನನ್ನ ಕಥೆಯನ್ನು ಪ್ರಕಟಿಸಿದರು. ಆರ್.ಕೆ. ಲಕ್ಷ್ಮಣ್ ಆಗ ಬೆಂಗಳೂರಿನಲ್ಲಿದ್ದರು. 'ಕೊರವಂಜಿ'ಯಲ್ಲಿ ಚಿತ್ರ ಬರೆಯುತ್ತಿದ್ದರು. 'ಮೈಸಿಂಡಿಯಾ'ದಲ್ಲಿ ನನ್ನ ಕಥೆಗೂ ಚಿತ್ರ ಬರೆದದ್ದು ನೋಡಿ ನನಗೆ ರೋಮಾಂಚನವಾಗಿಬಿಟ್ಟಿತು. ಪತ್ರಿಕೆಯ ಮೂರ್ನಾಲ್ಕು ಪ್ರತಿ ತೆಗೆದುಕೊಂಡು ಸ್ನೇಹಿತರಿಗೆಲ್ಲ ಹಂಚಿದೆ. ನಂತರ ಇನ್ನೂ ಎರಡು ಮೂರು ಕಥೆಗಳನ್ನು 'ಮೈಸಿಂಡಿಯಾ'ಗೆ ಕಳಿಸಿದೆ. ಒಂದು ಸಲ ನಾನು ಕಳಿಸಿದ ಕಥೆ ವಾಪಸ್ಸು ಬಂದುಬಿಟ್ಟಿತು. ಬಹುತೇಕ ಎಲ್ಲ ಲೇಖಕರಿಗೂ ಇಂಥ ಅನುಭವ ಆಗಿಯೇ ಇರುತ್ತದೆ. ಆದರೆ ನನಗೆ ತುಂಬ ಶಾಕ್ ಆಯ್ತು. ಬರೆಯುವುದನ್ನೇ ಬಿಟ್ಟುಬಿಟ್ಟೆ. ಮುಂದೊಮ್ಮೆ ಫಿಲಿಪ್ಸ್ ಸ್ಪ್ರಾಟ್ ಧಾರವಾಡಕ್ಕೆ ಬಂದಾಗ ನನ್ನನ್ನು ಭೇಟಿಯಾದರು. 'ನೀವ್ಯಾಕೆ ಕಥೆಗಳನ್ನು ಕಳಿಸುತ್ತಿಲ್ಲ' ಎಂದು ಕೇಳಿದರು. 'ನಾನು ಕಳಿಸಿದ್ದೆ. ಅದು ತಿರಸ್ಕೃತ ಆಗಿಬಿಟ್ಟಿತು' ಎಂದೆ. ಅವರು ಇಂಗ್ಲೆಂಡಿಗೆ ಹೋಗಿದ್ದರು. ಆಗ ಡಾ. ಕೆ. ಎನ್ನುವವರು ಪತ್ರಿಕೆಯನ್ನು ನೋಡಿಕೊಳ್ಳುತ್ತಿದ್ದರು. ಆ ಡಾ. ಕೆ. ನನ್ನ ಕಥೆಯನ್ನು ರಿಜೆಕ್ಟ್ ಮಾಡಿದ್ದರು. ಈ ಕುರಿತು ಫಿಲಿಪ್ಸ್ ಸ್ಪ್ರಾಟ್ ಬೇಸರ ವ್ಯಕ್ತಪಡಿಸಿದರು. ಅನಂತರ ನಾನು ಕಥೆ ಬರೆಯಲಿಲ್ಲ.

● **ನೀವು ಐದು ದಶಕಗಳ ಕಾಲ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದಿರಿ. ಸಂಶೋಧನೆಯಲ್ಲಿಯೂ ತೊಡಗಿದ್ದಿರಿ. ಕನ್ನಡದಲ್ಲಿ ನಿಮ್ಮ ಸುಮಾರು ಅರವತ್ತು ಗ್ರಂಥಗಳಿವೆ. ಇಂಗ್ಲಿಷಿನಲ್ಲಿ ಇಪ್ಪತ್ತೈದು ಗ್ರಂಥಗಳಿವೆ. ಇವುಗಳಲ್ಲಿ ಬಹುಪಾಲು ವಿಮರ್ಶಾ ಗ್ರಂಥಗಳು. ಇಷ್ಟು ದೊಡ್ಡ ಪ್ರಮಾಣದಲ್ಲಿ**